WRITING OF RECORDS OF RIGHTS AND INDEX OF LAND IN SOUTH KANARA DISTRICT

103. SRI KAGODU THIMMAPPA (Sagar).—

Will the Minister for Revenne be pleased to state.—

(*a*) whether it has come to the notice of the Government that while writing the new records of rights and index of land records recently the village Accountants in South Kanara District have not followed the rules;

(*b*) whether it has come to the notice of the Government that due to this stop of the Village Accountants injustice has been done to tenanted ryots;

(*c*) whether Government would take steps to conduct open enquiries in the villages in this regard and to re-write above records afresh ?

SRI N. HUTCHMASTHY GOWDA (Minister For Revenue).—

(*a*) No.

(*b*) This question does not arise in view of reply to clause (a) above.

(*c*) This question does not arise in view of replies to clauses (a) and (b) above.

ಶ್ರೀ ಕಾಗೋಡು ತಿಮ್ಮಪ್ಪ.—ಸ್ವಾಮಿ, ತಾವು ನನ್ನ ಪ್ರಶ್ನೆಗೆ ಉತ್ತರವಾಗಿ ಹೊಸದಾಗಿ ಆರ್.ಆರ್. ಇಂಡೆಕ್ಸ್ ಬರೆಯುವ ಬಗ್ಗೆ ಆಪಾದನೆಗಳು ಬಂದಿಲ್ಲ ಎಂದು ಹೇಳಿದ್ದೀರಿ. ಹಾಗಾದರೆ ಇತ್ತೀಚೆಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೊಸದಾಗಿ ಆರ್.ಆರ್. ಇಂಡೆಕ್ಸ್ ಬರೆಸಿರುವುದು ನಿಜವೇ ಮತ್ತು ಇದರ ಬಗ್ಗೆ ಸಾರ್ವಜನಿಕರಿಂದ ಎಷ್ಟು ದೂರುಗಳು ಬಂದಿವೆ ?

† ಶ್ರೀ ಎನ್. ಹುಚ್ಚಮಾಸ್ತಿಗೌಡ.—ಕೆಲವು ಗೇಣಿ ರೈತರಿಗೆ ಅನ್ಯಾಯವಾಗಿದೆ, ತಮ್ಮ ಹೆಸರಿಗೆ ದಾಖಲಾತಿ ಇಲ್ಲ ಎಂದು ೨೩೩೧ ಅರ್ಜಿಗಳು ಬಂದಿವೆ. ಲ್ಯಾಂಡ್ ರೆವಿನ್ಯೂ ಆಕ್ಟ್ ೧೩೬ (೩) ನೇ ಕಲಂ ಪ್ರಕಾರ ೧೫೦ ಅರ್ಜಿಗಳು ಬಂದಿವೆ,

ಶ್ರೀ ಕಾಗೋಡು ತಿಮ್ಮಪ್ಪ.—ಇಷ್ಟು ಅಗಾಧ ಪ್ರಮಾಣದಲ್ಲಿ ಸಾಮೂಹಿಕವಾಗಿ ತಕರಾರುಗಳು ಗೇಣಿದಾರರಿಂದ ಬಂದಿರುವಾಗ ಲ್ಯಾಂಡ್ ರೆವಿನ್ಯೂ ರೂಲ್ಸ್ ೩೦ರ ಪ್ರಕಾರ ಆರ್.ಆರ್. ಇಂಡೆಕ್ಸ್ ಬರೆದಿಲ್ಲ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ? ಒಂದು ವೇಳೆ ಅದು ತಮ್ಮ ಗಮನಕ್ಕೆ ಬಂದಿದ್ದರೆ ಲ್ಯಾಂಡ್ ರೆವಿನ್ಯೂ ಶಾಸನದ ಪ್ರಕಾರ ಆರ್.ಆರ್. ಇಂಡೆಕ್ಸ್ ಬರೆಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಎನ್. ಹುಚ್ಚಮಾಸ್ತಿಗೌಡ —ಲ್ಯಾಂಡ್ ರೆವಿನ್ಯೂ ಆಕ್ಟ್ ೧೩೬ (೩) ಕಲಂ ಪ್ರಕಾರ ಡೆಪ್ಯುಟಿ ಕಮಿಷನರು ರಿವಿಜನ್ ಆಫೀಲಿನಲ್ಲಿ ಖುದ್ದಾಗಿ ಪ್ರವಾಸ ಮಾಡಿ ವಿಚಾರಣೆ ಮಾಡುವುದಕ್ಕೆ ಅವಕಾಶ ಇದೆ. ಅದರ ಪ್ರಕಾರ ಕೆಲವು ಅರ್ಜಿಗಳನ್ನು ಅವರಿಗೆ ವಿಚಾರಣೆ ಮಾಡುವುದಕ್ಕೆ ಕಳುಹಿಸಿ ಕೊಟ್ಟಿದೆ. ಮತ್ತು ನಮಗೆ ಬಂದಿರತಕ್ಕ ೨೩೩೧ ಅರ್ಜಿಗಳನ್ನು ಕೂಡ ವಿಚಾರಣೆ ಮಾಡಬೇಕು ಎಂದು ತಹಸೀಲ್ದಾರರಿಗೆ ನಾವು ಕಳುಹಿಸಿಕೊಟ್ಟಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ.—ಆರ್.ಆರ್. ಇಂಡೆಕ್ಸ್‌ಗಳನ್ನು ವಿಲೇಜ್ ಆಕೌಂಟೆಟರುಗಳು ಟ್ಯಾಂಪರ್ ಮಾಡುತ್ತಾರೆ. ಆದ್ದರಿಂದ ಆರ್.ಆರ್. ಇಂಡೆಕ್ಸ್‌ಗಳನ್ನು ತಾಲ್ಲೂಕು ಆಫೀಸುಗಳಲ್ಲಿ ಇಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಆರ್.ಆರ್. ಬರೆಯುತ್ತಾ ಇರತಕ್ಕ ಜಿಲ್ಲೆಯಲ್ಲಿರತಕ್ಕ ಸಮಾಚಾರ ಬೇರೆ ಬೇರೆ ಜಿಲ್ಲೆಗಳಲ್ಲಿ ಅದೆಲ್ಲಾ ತಯಾರಾದ ಮೇಲೆ ಅದರ ನಕಲನ್ನು ತಾಲ್ಲೂಕು ಆಫೀಸಿನಲ್ಲಿ ಇಡಬೇಕು ಎಂದು ಇದೆ. ಆದರೆ ಮಾನ್ಯ ಸದಸ್ಯರು ಕೇಳತಕ್ಕ ಪ್ರಶ್ನೆಗೂ ಇದಕ್ಕೂ ನೇರವಾದ ಸಂಬಂಧ ಇಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಹೊಸದಾಗಿ ಆರ್.ಆರ್. ಇಂಡೆಕ್ಸ್ ಬರತಕ್ಕ ಕಾಲದಲ್ಲಿ ಲ್ಯಾಂಡ್ ರೆವಿನ್ಯೂ ರೂಲ್ಸ್ ೪೦ರ ಪ್ರಕಾರ ಯಾವ ಯಾವ ನಿಯಮವನ್ನು ಅನುಸರಿಸಬೇಕೆಂದು ಇದೆಯೋ ಅದನ್ನು ಅನುಸರಿಸಂತ್ತಿದ್ದಾರೆಯೇ ? ಆ ರೀತಿ ತಯಾರು ಮಾಡಿದ ಆರ್.ಆರ್. ಇಂಡೆಕ್ಸ್ ಅನ್ನು ರೆವಿನ್ಯೂ ಇನ್‌ಸ್ಪೆಕ್ಟರ್ ೫೦ ಪರ್ಸೆಂಟ್ ಚೆಕ್ ಮಾಡಬೇಕು ಅದನ್ನು ಪ್ರತಿಗ್ರಾಮದಲ್ಲಿಯೂ ಪಬ್ಲಿಷ್ ಮಾಡಬೇಕು ಎಂದು ಇದೆ. ಇದನ್ನು ಯಾವ ಗ್ರಾಮದಲ್ಲಿಯೂ ಅನುಸರಿಸಿಲ್ಲ. ಆದ್ದರಿಂದ ದಯಮಾಡಿ ಇದು ನಡೆದಿದೆಯೇ ಇಲ್ಲವೇ ಎಂಬುದನ್ನು ಪರಿಶೀಲನೆ ಮಾಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗ ಬಂದಿರತಕ್ಕ ಅರ್ಜಿಗಳನ್ನು ವಿಚಾರಣೆ ಮಾಡುವಾಗ ಆ ಕ್ರಮವನ್ನು ಅನುಸರಿಸಿದ್ದಾರೆಯೇ ಇಲ್ಲವೇ ಎನ್ನುವ ಬಗ್ಗೆ ಸಾಕಷ್ಟು ಕಾಲಾವಕಾಶ ಕೊಟ್ಟು ಇದನ್ನು ವಿಚಾರಣೆ ಮಾಡಬೇಕು ಎಂದು ಜಿಲ್ಲಾಧಿಕಾರಿಗಳಿಗೆ ತಿಳಿಸಿದ್ದೇವೆ. ಆಮೇಲೆ ಎಲ್ಲೆಲ್ಲಿ ತಕರಾರುಗಳು ಬಂದಿವೆ ಅಲ್ಲಿ ವಿಚಾರಣೆ ಮಾಡಬೇಕು ಎಂದು ಜಿಲ್ಲಾಧಿಕಾರಿಗಳಿಗೆ ತಿಳಿಸಿದ್ದೇವೆ. ಈಗ ಉದಾಹರಣೆಗೆ ಬಂಟವಾಳ ತಾಲ್ಲೂಕಿನಲ್ಲಿ ೪೮೬ ಅರ್ಜಿಗಳು ಬಂದಿವೆ. ಪುತ್ತೂರಿನಲ್ಲಿ ೫೭೯ ಅರ್ಜಿಗಳು ಬಂದಿವೆ. ಹೀಗೆ ಹೆಚ್ಚು ಅರ್ಜಿಗಳು ಬಂದಿರುವ ಕಡೆ ಈ ಕ್ರಮವನ್ನು ಅನುಸರಿಸಿದ್ದಾರೆಯೇ ಇಲ್ಲವೇ ಎಂಬುದನ್ನು ವಿಚಾರಣೆ ಮಾಡಿ, ಅವಶ್ಯಕವಾಗಿದ್ದರೆ ಪುನರ್ ವಿಚಾರಣೆ ಮಾಡಿ ಎಂದೂ ಈಗಾಗಲೇ ಜಿಲ್ಲಾಧಿಕಾರಿಗಳಿಗೆ ತಿಳಿಸಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ.—ಸಾಮಾನ್ಯವಾಗಿ ಹೇರವಾಗಿ ಉಡುಪಿ ತಾಲ್ಲೂಕಿನಲ್ಲಿ ತಕರಾರು ಹಾಕುವುದಕ್ಕೆ ಗೊತ್ತಿಲ್ಲದೆ ಇರುವವರು ಅನೇಕರು ತಕರಾರು ಹಾಕಿಲ್ಲ. ಈ ದೃಷ್ಟಿಯಿಂದ ವಿಲೇಜ್ ಅಕೌಂಟೆಂಟ್‌ಗಳು ಏನು ಆರ್.ಆರ್. ಇಂಡೆಕ್ಸ್ ಅನ್ನು ಸಿದ್ಧಪಡಿಸಿದ್ದಾರೆ ಅದನ್ನು ಪ್ರತಿಯೊಂದು ಗ್ರಾಮದಲ್ಲಿಯೂ ಚಾವಡಿಯಲ್ಲಿ ಪಬ್ಲಿಷ್ ಮಾಡಿ ಅವರು ತಕರಾರು ಹಾಕುವುದಕ್ಕೆ ಅವಕಾಶ ಮಾಡಿಕೊಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ಬಗ್ಗೆ ಬಹಳ ತಕರಾರು ಇರುವುದರಿಂದ ಇದನ್ನು ಯಾವ ರೀತಿ ಬಗೆಹರಿಸಬೇಕು, ಎಂಬುದನ್ನು ಆಲೋಚನೆ ಮಾಡಬೇಕಾಗುತ್ತದೆ.

APPLIED NUTRITION PROGRAMME IN SIRA TALUK

147 SRI T. TARE GOWDA (Kallambella) :—Will the Minister for Community Development and Social Welfare be pleased to state —

(a) whether Government had assured to sanction Applied Nutrition Programme to Sira taluk during 1974 75 as it is a proverbially famine stricken and drought area ;

(b) whether the Government is aware that there are no rains uptil now and drought conditions prevail at present and the Scheduled Caste and Scheduled Tribes and socially backward people are in great difficulties ;

(c) whether they intend to Sanction A. N. P. Scheme to Sira Taluk this year in view of the above facts ?

SRI N. RACHAIAH (MINISTER FOR COMMUNITY DEVELOPMENT AND SOCIAL WELFARE)

) No definite assurance was given.